**ಮೊದಲನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ.**
CC No. 131/2007

CW -4 PW - 5

| | | |
|---|---|---|
| ಹೆಸರು | ಃ | ಸಂತೋಷ್ |
| ತಂದೆಯ ಹೆಸರು | ಃ | ಚಿದಾನಂದಸ್ವಾಮಿ |
| ವಯಸ್ಸು | ಃ | 42 ವರ್ಷ |
| ಉದ್ಯೋಗ | ಃ | ಕೂಲಿ |
| ವಾಸ | ಃ | ಬಿಜ್ಜಹಳ್ಳಿ |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ ದಿನಾಂಕ 01.10.2022

ಈ ದಿನ ಆರೋಪಿ ನ್ಯಾಯಾಲಯಕ್ಕೆ ಗೈರು ಹಾಜರಿದ್ದು, ಅವರ ಗುರುತಿಸುವಿಕೆಗೆ ಆರೋಪಿ ಪರ ವಕೀಲರು ಯಾವುದೇ ತಕರಾರು ಇರುವುದಿಲ್ಲ ಎಂದು ನುಡಿದಿರುತ್ತಾರೆ. ಚಾಸಾ-1,2, 3,5 ಮತ್ತು 6 ರವರು ಗೊತ್ತಿಲ್ಲ.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು. ಪೋಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿ ಯಾವುದೇ ವಸ್ತುಗಳನ್ನು ಅಮಾನತು ಪಡಿಸಿಕೊಂಡಿರುವುದಿಲ್ಲ. ನಿಪಿ-6 ರಲ್ಲಿ ಏನು ಬರೆದಿದೆ ನನಗೆ ಗೊತ್ತಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯಾಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲುಗೆ ಅನುಮತಿ ಕೋರಿರುತ್ತಾರೆ. ಅನುಮತಿಸಲಾಯಿತು)**

ದಿಃ 29.05.2006 ರಂದು ಕನಕಪುರ ವಲಯಕ್ಕೆ ಸೇರಿದ ಬಿಜ್ಜಹಳ್ಳಿ ಸರ್ವೆ ನಂಬರ್ 27 ಕ್ಕೆ ಸೇರಿದ ಸಿದ್ದಾರಬೆಟ್ಟ, ಕಿರುಅರಣ್ಯ ಪ್ರದೇಶದಲ್ಲಿ ಆರೋಪಿಯು ಕಲ್ಲುಗಣಿ ಲೀಸ್ ನಂ.672 ಅಡಿ ಹುಣಸನಹಳ್ಳಿ ಶಾಖಾ ವನಪಾಲಕರು ಹಾಗೂ ಸಿಬ್ಬಂದಿಯವರು ಬಂದು ಪಂಚಾಯತಿದಾರರಾಗಿ ನಮ್ಮನ್ನು ಬರಮಾಡಿಕೊಂಡು ಆರೋಪಿಯು ಕರಿಕಲ್ಲುಗಣಿ ಗಳಿ

ಮದ್ಯಾಹ್ನ 2.30 ಗಂಟೆಗೆ ಅಜಾಮಯಿಸಿ ತಿಳಿಸಿ, ಅಲ್ಲಿ ಆರೋಪಿಯು ಕಲ್ಲುಗಣಿಗಾರಿಕೆ ನಡೆಸುತ್ತಿರುವುದು ನಿಜವಾಗಿತ್ತು ಎಂದರೆ ಸರಿಯಲ್ಲ. ಸದರಿ ಕರಿಕಲ್ಲು ಗಣಿ ಬಳಿ ಕಲ್ಲಿನ ಬ್ಲಾಕ್ ಗಳನ್ನು ದಾಸ್ತಾನು ಮಾಡಿರುವುದು ಸಹ ಕಂಡು ಬಂದಿತು ಎಂದರೆ ಸರಿಯಲ್ಲ. ಸದರಿ ಸ್ಥಳವು ಬಿಜ್ಜಹಳ್ಳಿ ಅರಣ್ಯ ಪ್ರದೇಶಕ್ಕೆ ಸೇರಿದ್ದು, ಸದರಿಯವರು ಮಾಡುತ್ತಿರುವ ಕಲ್ಲು ಗಣಿ ಕೆಲಸ ಅರಣ್ಯ ಇಲಾಖಾ ಕಾನೂನು ರೀತಿ ಕಾನೂನು ಬಾಹಿರವಾಗಿರುವುದರಿಂದ, ಸದರಿ ಸ್ಥಳದಲ್ಲಿ 10 ಕಲ್ಲಿನ ಬ್ಲಾಕ್ ಗಳನ್ನು ಸರ್ಕಾರದ ಪರ ಅಮಾನತು ಪಡಿಸಿಕೊಂಡು ಅರಣ್ಯ ಮೊಕದ್ದಮೆ ದಾಖಲು ಮಾಡಿ, ಸದರಿ ಕಲ್ಲಿನ ಬ್ಲಾಕ್ ಗಳಿಗೆ 1 ರಿಂದ 10 ರವರೆಗೆ ಕೆಂಪು ಬಣ್ಣದಿಂದ ಕ್ರಮ ಸಂಖ್ಯೆ ಕೊಟ್ಟು ಅಳತೆ ಮಾಡಿ, ನನ್ನ ಸಮಕ್ಷಮ ಮಹಜರ್ ಕ್ರಮ ಜರುಗಿಸಿ ಕಲ್ಲುಗಳನ್ನು ಅಮಾನತು ಪಡಿಸಿಕೊಂಡರು ಎಂದರೆ ಸರಿಯಲ್ಲ. ನನ್ನ ಸಹಿಯನ್ನು ಸ್ಥಳದಲ್ಲೇ ಪಡೆದರು ಎಂದರೆ ಸರಿಯಲ್ಲ. ಆರೋಪಿಗಳೊಂದಿಗೆ ರಾಜೀ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ಶ್ರೀ. ವಕೀಲರಿಂದ:**

ಏನು ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಮೊದಲನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕನಕಪುರ

**ಮೊದಲನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ.**
CC No. 131/2007

CW -3 PW - 4

| | | |
|---|---|---|
| ಹೆಸರು | ಃ | ಶಿವರುದ್ರಯ್ಯ |
| ತಂದೆಯ ಹೆಸರು | ಃ | ಕಾಳಪ್ಪ |
| ವಯಸ್ಸು | ಃ | 36 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ | ಃ | ಬಿಜ್ಜಹಳ್ಳಿ |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ ದಿನಾಂಕ 01.10.2022

ಈ ದಿನ ಆರೋಪಿ ನ್ಯಾಯಾಲಯಕ್ಕೆ ಗೈರು ಹಾಜರಿದ್ದು, ಅವರ ಗುರುತಿಸುವಿಕೆಗೆ ಆರೋಪಿ ಪರ ವಕೀಲರು ಯಾವುದೇ ತಕರಾರು ಇರುವುದಿಲ್ಲ ಎಂದು ನುಡಿದಿರುತ್ತಾರೆ. ಚಾಸಾ-1,2, 5 ಮತ್ತು 6 ರವರು ಗೊತ್ತಿಲ್ಲ.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ಮಹಜರ್ ಆಗಿದ್ದು, ಅದನ್ನು ನಿಪಿ-6 ಎಂದು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಪೋಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿ ಯಾವುದೇ ವಸ್ತುಗಳನ್ನು ಅಮಾನತು ಪಡಿಸಿಕೊಂಡಿರುವುದಿಲ್ಲ. ನಿಪಿ-6 ರಲ್ಲಿ ಏನು ಬರೆದಿದೆ ನನಗೆ ಗೊತ್ತಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯಾೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲುಗೆ ಅನುಮತಿ ಕೋರಿರುತ್ತಾರೆ. ಅನುಮತಿಸಲಾಯಿತು)**

ದಿಃ 29.05.2006 ರಂದು ಕನಕಪುರ ವಲಯಕ್ಕೆ ಸೇರಿದ ಬಿಜ್ಜಹಳ್ಳಿ ಸರ್ವೆ ನಂಬರ್ 27 ಕ್ಕೆ ಸೇರಿದ ಸಿದ್ದಾರಬೆಟ್ಟ, ಕಿರುಅರಣ್ಯ ಪ್ರದೇಶದಲ್ಲಿ ಆರೋಪಿಯು ಕಲ್ಲುಗಣಿ ಲೀಸ್ ನಂ.672 ಅಡಿ ಹುಣಸನಹಳ್ಳಿ ಶಾಖಾ ವನಪಾಲಕರು ಹಾಗೂ ಸಿಬ್ಬಂದಿಯವರು ಬಂದು ಪಂಚಾಯತಿದಾರರಾಗಿ ನಮ್ಮನ್ನು ಬರಮಾಡಿಕೊಂಡು ಆರೋಪಿಯು ಕರಿಕಲ್ಲುಗಣಿ ಗಳಿ ಮದ್ಯಾಹ್ನ 2.30 ಗಂಟೆಗೆ ಅಜಾಮಯಿಸಿ ತಿಳಿಸಿ, ಅಲ್ಲಿ ಆರೋಪಿಯು ಕಲ್ಲುಗಣಿಗಾರಿಕೆ

ನಡೆಸುತ್ತಿರುವುದು ನಿಜವಾಗಿತ್ತು ಎಂದರೆ ಸರಿಯಲ್ಲ. ಸದರಿ ಕರಿಕಲ್ಲು ಗಣಿ ಬಳಿ ಕಲ್ಲಿನ ಬ್ಲಾಕ್ ಗಳನ್ನು ದಾಸ್ತಾನು ಮಾಡಿರುವುದು ಸಹ ಕಂಡು ಬಂದಿತು ಎಂದರೆ ಸರಿಯಲ್ಲ. ಸದರಿ ಸ್ಥಳವು ಬಿಜ್ಜಹಳ್ಳಿ ಅರಣ್ಯ ಪ್ರದೇಶಕ್ಕೆ ಸೇರಿದ್ದು, ಸದರಿಯವರು ಮಾಡುತ್ತಿರುವ ಕಲ್ಲು ಗಣಿ ಕೆಲಸ ಅರಣ್ಯ ಇಲಾಖಾ ಕಾನೂನು ರೀತಿ ಕಾನೂನು ಬಾಹಿರವಾಗಿರುವುದರಿಂದ, ಸದರಿ ಸ್ಥಳದಲ್ಲಿ 10 ಕಲ್ಲಿನ ಬ್ಲಾಕ್ ಗಳನ್ನು ಸರ್ಕಾರದ ಪರ ಅಮಾನತು ಪಡಿಸಿಕೊಂಡು ಅರಣ್ಯ ಮೊಕದ್ದಮೆ ದಾಖಲು ಮಾಡಿ, ಸದರಿ ಕಲ್ಲಿನ ಬ್ಲಾಕ್ ಗಳಿಗೆ 1 ರಿಂದ 10 ರವರೆಗೆ ಕೆಂಪು ಬಣ್ಣದಿಂದ ಕ್ರಮ ಸಂಖ್ಯೆ ಕೊಟ್ಟು ಅಳತೆ ಮಾಡಿ, ನನ್ನ ಸಮಕ್ಷಮ ಮಹಜರ್ ಕ್ರಮ ಜರುಗಿಸಿ ಕಲ್ಲುಗಳನ್ನು ಅಮಾನತು ಪಡಿಸಿಕೊಂಡರು ಎಂದರೆ ಸರಿಯಲ್ಲ. ನನ್ನ ಸಹಿಯನ್ನು ಸ್ಥಳದಲ್ಲೇ ಪಡೆದರು ಎಂದರೆ ಸರಿಯಲ್ಲ. ಆರೋಪಿಗಳೊಂದಿಗೆ ರಾಜೀ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ಶ್ರೀ. ವಕೀಲರಿಂದಃ**

ಏನು ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಮೊದಲನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕನಕಪುರ